3.	ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುವ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಅನುದಾನ	45,985	59,000	52,000
4.	ಅಲ್ಪಸಂಖ್ಯಾತರಿಗಾಗಿ ಮೊರಾರ್ಜಿ ದೇಸಾಯಿ ವಸತಿಶಾಲೆಗಳು	8,63,000	10,00,000	12,03,150
5.	ಶಾದಿಮಹಲ್ ನಿರ್ಮಾಣಕ್ಕೆ ಅನುದಾನ ನೀಡಿಕೆ	--	7,00,000	--
	ಒಟ್ಟು	9,57,538	18,26,000	13,02,150

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮದಿಂದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಶಿವಮೊಗ್ಗ ಜಿಲ್ಲೆಗೆ ನಿಗದಿ ಪಡಿಸಿದ ಮೊತ್ತ

(ರೂ. ಲಕ್ಷಗಳಲ್ಲಿ)

	2000-01	2001-02	2002-03
	ರೂ.	ರೂ.	ರೂ.
1. ಸ್ವಾ.ಸಾ. ಯೋಜನೆ	12.93	21.66	19.78
2. ವೃತ್ತಿ ಆಧಾರಿತ ತರಬೇತಿ	8.64	4.00	2.40
3. ಗಂಗಾ ಕಲ್ಯಾಣ ಯೋಜನೆ	21.61	8.45	12.75
ಒಟ್ಟು	43.18	34.11	34.93

ಅ) ಅಲ್ಪಸಂಖ್ಯಾತರ ಇಲಾಖೆಯ ಹಣ ಪೂರ್ಣ ಮೆಚ್ಚವಾಗಿದೆ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ 2000-01 ಮತ್ತು 2001-02ನೇ ಸಾಲಿನಲ್ಲಿ ನಿಗದಿ, ಪಡಿಸಿದ ಮೊತ್ತ ಪೂರ್ಣವಾಗಿ ಖರ್ಚಾಗಿದೆ 2002-03ನೇ ಸಾಲಿನಲ್ಲಿ ನಿಗದಿ ಪಡಿಸಿದ ಮೊತ್ತದಲ್ಲಿ ರೂ. 13.6 ಲಕ್ಷ ರೂಪಾಯಿಗಳು ಖರ್ಚಾಗಿದ್ದು ಬಾಕಿ ಮೊತ್ತವು ಮಾರ್ಚ್ ತಿಂಗಳಲ್ಲಿ ಖರ್ಚಾಗುವ ಸಂಭವವಿದೆ.

ಕೊಳ್ಳೇಗಾಲದಲ್ಲಿ ಸಣ್ಣ ಕೈಗಾರಿಕೆಯ ಮಳಿಗೆಗಳು

1126 (1353) ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲದಲ್ಲಿ ಸಣ್ಣ ಕೈಗಾರಿಕೆಯ ಮಳಿಗೆಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಮಳಿಗೆಗಳ ಕೊರತೆ ನಿವಾರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಇ) ಕೊಳ್ಳೇಗಾಲದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು) :

ಅ) ಹೌದು.

ಆ) ಕೊಳ್ಳೇಗಾಲದಲ್ಲಿ 7.01 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತುವನ್ನು ನಿರ್ಮಿಸಲಾಗಿದೆ. ವಿವರಗಳು ಕೆಳಕಂಡಂತಿವೆ :

1.	ಕಟ್ಟಿಲಾಗಿರುವ ಮಳಿಗೆಗಳು	24
2.	ಹಂಚಿಕೆ ಮಾಡಲಾಗಿರುವ ಮಳಿಗೆಗಳು	22
3.	ಖಾಲಿ ಇರುವ ಮಳಿಗೆಗಳು	02
4.	ಅಭಿವೃದ್ಧಿ ಪಡಿಸಿರುವ ನಿವೇಶನಗಳು	16
5.	ಹಂಚಿಕೆ ಮಾಡಲಾದ ನಿವೇಶನಗಳು	16

ಈ ಕೈಗಾರಿಕಾ ವಸಾಹತುವಿನಲ್ಲಿ ಮಳಿಗೆಗಳನ್ನು ಹೆಚ್ಚಿಸಲು ಸ್ಥಳ ಅಭಾವದ ಕಾರಣ, ಬೇರೆ ಕೈಗಾರಿಕಾ ವಸಹತು ನಿರ್ಮಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ 20-02-2003 ರಂದು ದಿನ ಪತ್ರಿಕೆಗಳಲ್ಲಿ ಬೇಡಿಕೆ ಸಮೀಕ್ಷೆಗಾಗಿ ಪ್ರಕಟಣೆ ನೀಡಿರುತ್ತಾರೆ.

ಇ) ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ, ಕೈಗಾರಿಕಾ ನೀತಿ 2001-06ರ ಪ್ರಕಾರ ಕೊಳ್ಳೇಗಾಲ ತಾಲ್ಲೂಕ್ ವಲಯ-ಸಿ ನಲ್ಲಿ ವರ್ಗೀಕರಿಸಲಾಗಿದೆ. ಅದರಂತೆ ಅತಿ ಸಣ್ಣ ಕೈಗಾರಿಕೆಗಳು ಹೂಡುವ ಸ್ಥಿರಬಂಡವಾಳದ ಮೇಲೆ ಶೇ. 20 ರಷ್ಟು - ಗರಿಷ್ಠ ರೂ. 10.00 ಲಕ್ಷದ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. ಮುದ್ರಾಂಕ ಶುಲ್ಕ ಪಾವತಿಯಲ್ಲಿ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ, ಪರಿವರ್ತನಾ ಶುಲ್ಕಮನ್ನಾ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ. ಇದಲ್ಲದೆ ಉದ್ಯಮಿಗಳ ಅನುಕೂಲಕ್ಕಾಗಿ ಉದ್ಯಮಶೀಲತಾ ಕಾರ್ಯ ಕ್ರಮ ಪ್ರೇರಣಾ ಶಿಬಿರ, ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕೊಳ್ಳೇಗಾಲ ತಾಲ್ಲೂಕು ಪ್ರಥಮ ದರ್ಜೆ ಹಾಸ್ಟೆಲ್‌ನ ಮೂಲಭೂತ ಸೌಲಭ್ಯ

1127 (1354) ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೆಗಾಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಪ್ರಥಮ ದರ್ಜೆ ಹಾಸ್ಟೆಲ್‌ನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಮೂಲಭೂತ ಸೌಲಭ್ಯವನ್ನು ಪೂರೈಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) -- ಹೌದು --

ಆ) ಮುಲಭೂತ ಸೌಕರ್ಯಗಳಾದ ಹಾಸಿಗೆ, ಹೊದಿಕೆ, ಸೋಲಾರ್ ಹೀಟರ್ : ಲೈಟಿಂಗ್, ಗ್ರಂಥಾಲಯ, ಬಣ್ಣದ ಟೀವಿ, ಅಡುಗೆ ಪಾತ್ರೆ ಸಾಮಾನುಗಳು, ಕ್ರೀಡಾ ಸಾಮಾಗ್ರಿ, ಸೋಪು, ಎಲ್‌ಪಿಜಿ ಗ್ಯಾಸ್ ಇತ್ಯಾದಿಗಳನ್ನು ವಿದ್ಯಾರ್ಥಿನಿಲಯಕ್ಕೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.